ಪ.ಜಾ.ತಿ: ಪ. ವರ್ಗಗಳ ವಿದ್ಯಾರ್ಥಿನಿಲಯಗಳ ವಿವರ

466 (46) ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ.ಜಾತಿ ಹಾಗೂ ಪ. ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ಸರ್ಕಾರಿ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು).

ಆ) ಜಿಲ್ಲೆಯ ಪ.ಜಾತಿ:ಪ. ವರ್ಗಗಳ ವಿದ್ಯಾರ್ಥಿ ವಿದ್ಯಾರ್ಥಿನಿಲಯರ ಸಂಖ್ಯೆಗೆ ಅನುಗುಣವಾಗಿ ಈ ವಿದ್ಯಾರ್ಥಿನಿಲಯಗಳ ಸಂಖ್ಯೆಯಲ್ಲಿ ತಾರತಮ್ಯ ಇದೆಯೇ?

ಇ) ಈ ತಾರತಮ್ಯ ನಿವಾರಣೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ಹಾಗೂ ಎಷ್ಟು ಕಾಲದಲ್ಲಿ ಈ ತಾರತಮ್ಯವನ್ನು ನಿವಾರಣೆ ಮಾಡಲಾಗುವುದು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯು (956) ಮೆಟ್ರಿಕ್‌ಪೂರ್ವ ಹಾಗೂ 143 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸುತ್ತಿದೆ. ಜಿಲ್ಲಾವಾರು ವಿದ್ಯಾರ್ಥಿ ನಿಲಯಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇದೆ.

ಇ) ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ:-

1. ಆಯವ್ಯಯ ಲಭ್ಯತೆಗೆ ಅನುಗುಣವಾಗಿ ಪ್ರತಿವರ್ಷ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುತ್ತಿದೆ.

2. ಸ್ವಯಂಸೇವಾ ಸಂಸ್ಥೆಗಳಿಗೆ ವಿದ್ಯಾರ್ಥಿನಿಲಯಗಳನ್ನು ನಡೆಸಲು ಉತ್ತೇಜನ ನೀಡುವುದು.

3. ಅಸ್ತಿತ್ವದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಿಸುವುದು.

ಜಿಲ್ಲಾವಾರು ವಿದ್ಯಾರ್ಥಿನಿಲಯಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ		ಮೆಟ್ರಿಕ್ ನಂತರ	
		ನಿಲಯಗಳ ಸಂಖ್ಯೆ	ಮಂಜೂರಾತಿ ಸಂಖ್ಯೆ	ನಿಲಯಗಳ ಸಂಖ್ಯೆ	ಮಂಜೂರಾತಿ ಸಂಖ್ಯೆ
1.	ಬೆಂಗಳೂರು (ಗ್ರಾಮಾಂತರ)	43	2395	2	100
2.	ಬೆಂಗಳೂರು (ನಗರ)	30	1715	8	1050
3.	ಚಿತ್ರದುರ್ಗ	55	2695	14	1800
4.	ಕೋಲಾರ	62	3599	14	1150
5.	ತುಮಕೂರು	51	2468	15	1550
6.	ಶಿವಮೊಗ್ಗ	45	2251	5	450
7.	ಮೈಸೂರು	63	3870	15	1375
8.	ಮಂಡ್ಯ	38	2227	5	425
9.	ಹಾಸನ	47	2538	3	200
10.	ಚಿಕ್ಕಮಗಳೂರು	30	1922	5	400
11.	ಕೊಡಗು	27	1271	3	150
12.	ದಕ್ಷಿಣ ಕನ್ನಡ	42	2350	3	200
13.	ಬೆಳಗಾಂ	50	2260	2	200
14.	ಬಿಜಾಪುರ	70	3251	4	300
15.	ಧಾರವಾಡ	69	3387	7	450
16.	ಉತ್ತರ ಕನ್ನಡ	27	1185	1	50
17.	ಗುಲ್ಬರ್ಗಾ	75	4583	13	1500
18.	ರಾಯಚೂರು	50	2397	8	530
19.	ಬಳ್ಳಾರಿ	48	2654	5	350
20.	ಬೀದರ್	34	2304	11	550
ಒಟ್ಟು	956	51622	143	12780	